ಪೂರ್ವಕವಾಗಿ ನುಡಿದಾಗ ವಿಜಯಮ್ಮ ಅಕ್ಕರೆಯಿಂದ, ‘ನಮ್ಗೆ ಬೇರೆ ಯಾರಿದ್ದಾರಮ್ಮಾ? ನೀನೂ, ಸೂರ್ಯ ನಮ್ಮಿಬ್ಬರ ಕಣ್ಣುಗಳಂತೆ ಇರ್ತೀರ.. ದುಃಖದ ಸಮಯ ಕಳೀತು.. ಇನ್ನೇನಿದ್ದರೂ ಖುಷಿ, ಸಂಭ್ರಮ ಮಾತ್ರ..’ ಎಂದರು.

ನಿಶ್ಚಿತಾರ್ಥದ ಮುನ್ನಾ ದಿನ ವಸುಮತಿ, ಶಂಕರ ಮತ್ತು ಮಕ್ಕಳು ಬಂದಿಳಿದರು.

‘ಏನಮ್ಮಾ ಓದೋಕೆ ಅಂತ ಈ ಮನೇಗೆ ಬಂದವ್ಳು ಇಲ್ಲೇ ಝೂಂಡಾ ಊರಿ ಬಿಟ್ಟೆಯಲ್ಲಾ.. ಹಿಂದೆ ಮುಂದೆ ಯೋಚನೆ ಮಾಡಲು ಬರುವುದಿಲ್ಲವೇ ನಿನಗೆ..? ಇಂಜಿನಿಯರಿಂಗ್ ಹುಡ್ಗೀ ಅಂತೆ ನೀನು..’ ಶಂಕರ ಬಂದಿಳಿದೊಡನೆ ತನ್ನ ಆಕ್ಷೇಪ ವ್ಯಕ್ತಪಡಿಸಿದ್ದ.

ಚಿಕ್ಕಪ್ಪನ ಮಾತಿನ ಮರ್ಮ ಅರಿಯದೇ, ಅವಳು ವಸುಮತಿಯ ಮುಖದತ್ತ ಪ್ರಶ್ನಾರ್ಥಕ ಭಾವ ಬೀರಿದರೆ, ಆಕೆ ಉದ್ದೇಶಪೂರ್ವಕ ಅಪೂರ್ವಳ ಕಣ್ಣೋಟವನ್ನು ತಪ್ಪಿಸಿದ್ದಳು. ಅಪೂರ್ವ ಮತ್ತು ಸೂರ್ಯನ ವಿಷಯ ತಿಳಿದ ಬಳಿಕ ಆಕೆ ಊರಿಂದ ಕರೆ ಮಾಡುವುದನ್ನು ಹೆಚ್ಚು ಕಮ್ಮಿ ನಿಲ್ಲಿಸಿಯೇ ಬಿಟ್ಟಿದ್ದರು. ತಮ್ಮಿಬ್ಬರ ಸಂಬಂಧ ಆಕೆಗೆ ಸ್ವೀಕಾರವಿಲ್ಲವೆಂಬಂತೆ ಅಪೂರ್ವಳಿಗೆ ಮನದಟ್ಟಾದರೂ ಹೃದಯ ಬಯಸಿದ ಬಂಧನದೊಳಗೆ ಅವಳ ಸೆರೆಯಾಗಿದ್ದಳು. ಚಿಕ್ಕಮ್ಮನ ಕೋಪ ಕ್ರಮೇಣ ಕರಗಬಹುದೆಂದು ತನಗೆ ತಾನೇ ಸಂತೈಸಿಕೊಂಡಿದ್ದಳು. ವಸುಮತಿ ಬಂದರೂ ಹಾರ್ದಿಕವಾಗಿ ಯಾವುದರಲ್ಲೂ ಪಾಲ್ಗೊಳ್ಳದೇ, ಕೇವಲ ಔಪಚಾರಿಕವಾಗಿ ಭಾಗವಹಿಸುವಂತಿದ್ದಳು. ಶಂಕರನೂ ಸಣ್ಣ ಸಣ್ಣ ವಿಚಾರಕ್ಕೂ ಕೆರಳುವಂತಿದ್ದ.

ಸಂಜೆ ನಾಲ್ಕು ಗಂಟೆಗೆ ಪುರೋಹಿತರ ಆಗಮನವಾಯಿತು. ಅಪೂರ್ವ, ವಿಜಯಮ್ಮ ಕೊಡಿಸಿದ ಸೀರೆ, ಆಭರಣ ಉಟ್ಟು, ಹೂ ಮುಡಿದು ಸರಳವಾಗಿ ಅಲಂಕರಿಸಿಕೊಂಡಿದ್ದಳು. ಸೂರ್ಯ ಜರಿ ಪಂಚೆ, ತುಂಬು ತೋಳಿನ ಕೆನೆ ಬಣ್ಣದ ಜರಿ ಅಂಗಿ ತೊಟ್ಟು ಲಕ್ಷಣವಾಗಿ ಕಾಣಿಸುತ್ತಿದ್ದ. ಇಬ್ಬರೂ ಜೊತೆಗೂಡಿ ಬಂದಾಗ ಆ ಜೋಡಿಯಿಂದ ಕಣ್ತೆಗೆಯಂತಾಗಿತ್ತು.

‘ನೀವಿಬ್ರೂ ಎಷ್ಟು ಚೆನ್ನಾಗಿ ಕಾಣ್ತೀರ.. ನನ್ನ ದೃಷ್ಟಿನೇ ತಗಲುವಂತಿದೆ..’ ವಿಜಯಮ್ಮ ನೆಟ್ಟಿಗೆ ಮುರಿದರು. ವಸುಮತಿಯ ಮನಸ್ಸೂ ವಿಜಯಮ್ಮನ ಮಾತುಗಳನ್ನೇ ಅನುಮೋದಿಸಿತ್ತು. ಆದರೆ.. ಸೂರ್ಯನ ಪೂರ್ಣ ಹಿನ್ನೆಲೆ ಅರಿವಿರದೇ ಅಪೂರ್ವ ಈ ಸಂಬಂಧ ಸ್ವೀಕರಿಸುತ್ತಿರುವಳಲ್ಲ..? ಎಂದು ಕಸಿವಿಸಿಯಾಗಿತ್ತು. ಶಂಕರ ಈ ಸಂಗತಿ ತಿಳಿದಾಗ ಹಾರಾಡಿದ್ದ. ಅವನಿಗೆ ಬುದ್ಧಿ ಹೇಳಿ ಒಪ್ಪಿಸಬೇಕಾದರೆ, ವಸುಮತಿಗೆ ಸಾಕುಸಾಕಾಗಿತ್ತು.

‘ಅವ್ಳು ಈಗ ಕೆಲಸಕ್ಕೆ ಸೇರ್ತಿದ್ದಾಳೆ...ನಮ್ಮ ಹಂಗು ಅವ್ಳಿಗೇನೂ ಇನ್ಮೇಲೆ ಅಗತ್ಯವಿಲ್ಲ.. ಅವ್ಳಿಗಿಷ್ಟ ಬಂದ ಹಾಗೆ ಮಾಡೋ ಹುಡ್ಗಿ ಅವ್ಳು.. ನಾವು ಒಪ್ದೇ ಹೋದ್ರೂ, ಅವ್ಳೇನು ನಮ್ಮ ಅಭಿಪ್ರಾಯ ಗಣನೆಗೆ ತಗೋಳಲ್ಲ.. ಅದಕ್ಕಿಂತ ದೊಡ್ಡ ಮನಸ್ಸಿನಿಂದ ಒಪ್ಪಿ ಗೌರವ, ಸಂಬಂಧ ಎರಡೂ ಉಳಿಸಿಕೊಳ್ಳೋದು ಮೇಲು... ಅವ್ಳಿಗೆ ಬಾಳು ಕೊಟ್ಟವರು ಅವರೇ.. ಅದಕ್ಕೆ ಪ್ರತಿಯಾಗಿ ಇದನ್ನು ಮಾಡ್ತಿದ್ದಾಳೆ ಅಂದ್ಕೊಳ್ಳೋದು..’

‘ಹೌದೇ...ಅವ್ಳಿಗೆ ನಾಳೆ ಸತ್ಯ ಸಂಗತಿ ತಿಳಿದ್ರೆ ಆಗ್ಲೂ ಅವ್ಳ ನಿರ್ಧಾರ ಇದೇ ಆಗಿರುತ್ತಾ..?. ಆ ಸಂಗತಿ ಆಮೇಲೆ ಗೊತ್ತಾಗುವ ಬದಲು ಈಗ್ಲೇ ತಿಳಿಸೋದು ವಾಸಿ ಅಲ್ವಾ..?’

‘ಬೇಡಾರಿ.. ಅವ್ಳು ಅವ್ನನ್ನ ಮನಸಾರೆ ಪ್ರೀತಿಸ್ತಿದ್ದಾಳೆ.. ಆ ಹುಡ್ಗನೂ..ಈಗ ಇವ್ಳಿಂದ ಜವಾಬ್ದಾರಿ ಕಲ್ತುಕೊಂಡಿದ್ದಾನೆ. ಇಬ್ರಿಗೂ ಒಳ್ಳೆದಾಗುತ್ತೆ ಅನ್ನೋದಾದ್ರೆ. ಅದನ್ನು ನಾವು ಹಾಳು ಮಾಡೋದ್ಯಾಕೆ..?’ ಉದಾರ ಮನಸ್ಸು ತೋರಿಸಿದ್ದರೂ, ಆಂತರಿಕವಾಗಿ ಎಲ್ಲೋ ಪ್ರತಿರೋಧ ಇದ್ದೇ ಇತ್ತು. ವಸುಮತಿಯಲ್ಲಿ. ನಿಶ್ಚಿತಾರ್ಥದ ಔಪಚಾರಿಕ ವಿಧಿವಿಧಾನಗಳು ಶುರುವಾದವು. ಎರಡೂ ಮನೆಯವರು ಪರಸ್ಪರ ಫಲ ತಾಂಬೂಲಗಳನ್ನು ಬದಲಿಸಿಕೊಂಡರು. ಸಿಹಿ ಡಬ್ಬಿಗಳನ್ನು ಬದಲಿಸಿಕೊಂಡರು. ವಿಜಯಮ್ಮ ಅಪೂರ್ವಳಿಗೆ ಮತ್ತೊಂದು ಸೀರೆ, ಒಡವೆ ನೀಡಿ ಹೂ ಮುಡಿಸಿದರು. ವಿಜಯಮ್ಮ ತಾವೇ ಖರೀದಿಸಿ ತಂದಿದ್ದ ಶರ್ಟ್ ಪ್ಯಾಂಟಿನ ಬಟ್ಟೆ, ಉಂಗುರ ವಸುಮತಿಗೆ ನೀಡಿ ಸೂರ್ಯನಿಗೆ ನೀಡುವಂತೆ ತಿಳಿಸಿದರು. ಅದೇ ಹೊತ್ತಿಗೆ ಸರಿಯಾಗಿ ಜೈಲರ್ ಪುಟ್ಟಸ್ವಾಮಯ್ಯನವರ ಆಗಮನವಾಗಿತ್ತು. ಅವರ ಅನಿರೀಕ್ಷಿತ ಭೇಟಿಗೆ ಪ್ರಭಾಕರರಾಯರ ಮುಖ ಬಿಳಿಚಿಕೊಂಡಿತ್ತು.

‘ಏನಯ್ಯ? ಮಗನ ನಿಶ್ಚಿತಾರ್ಥ ಗುಟ್ಟಾಗಿ ಮಾಡ್ತಿದ್ದೀಯಾ..?’ಎಂದು ನಗೆಯಾಡಿದರು. ಪ್ರಭಾಕರರಾಯರು ಬಾರದ ನಗೆ ನಕ್ಕರು.

‘ಯಾರಿಗೂ ತಿಳಿಸಲಿಲ್ವೋ.. ಖಾಸಗಿಯಾಗಿ ಮಾಡೋಣಾಂತ...’

‘ನೀನು ಕರೆಯದಿದ್ದರೆ ಏನು? ನಿನ್ಮಗ ಕರೆದಿದ್ದಾನೆ ನನ್ಗೆ.. ಅದಕ್ಕೇ ಬಂದೆ..’ಎಂದಾಗ ರಾಯರು ಅಚ್ಚರಿಯಿಂದ ಮಗನೆಡೆಗೆ ನೋಡಿದರು.

ಸೂರ್ಯ ಮುಂದೆ ಬಂದು, ‘ಹೌದಪ್ಪ.. ಇವತ್ತು ನಾನಿಲ್ಲಿ ಸಭ್ಯನಾಗಿ ನಿಲ್ಲಲು ಅವ್ರೇ ಕಾರಣ.. ಜೈಲಿನಲ್ಲಿ ನನ್ನನ್ನು ಖೈದಿಯಂತೆ ಕಾಣದೇ, ಆತ್ಮೀಯವಾಗಿ ಬುದ್ಧಿವಾದ ಹೇಳ್ತಿದ್ದರು.. ನೀತಿ ಪಾಠ ಹೇಳ್ತಿದ್ರು.. ಅವರ ಉಪದೇಶದ ಪ್ರಭಾವದಿಂದಲೇ ನನ್ನಲ್ಲಿ ನೈತಿಕತೆ ಸದಾ ಜಾಗೃತವಾಗಿರುತ್ತಿತ್ತು.. ಗೋಪಿ ಜೊತೆ ಹೋದ್ರು ಕಳ್ಳತನಕ್ಕಿಳಿಯದೇ, ಮೂಟೆ ಹೊತ್ತು ಅನ್ನ ಸಂಪಾದಿಸ್ತಿದ್ದೆ..’ ಎಂದಾಗ ರಾಯರು ಕೃತಜ್ಞತೆಯಿಂದ ಗೆಳೆಯನ ಮುಂದೆ ಕೈ ಮುಗಿದರು.

‘ಇದೆಲ್ಲಾ ಏನೋ ಪ್ರಭಾಕರ ನಮ್ಮ ನಡುವೆ.. ಇರಲಿ ಬಿಡು..’ ಎಂದು ಮಾತು ತೇಲಿಸುತ್ತ ಆಸೀನರಾದರು.

‘ಸರಿಯಾದ ಹೆಣ್ಣನ್ನೇ ಸೂರ್ಯ ಆಯ್ಕೆ ಮಾಡಿಕೊಂಡಿದ್ದಾನೆ..’ ಅಪೂರ್ವಳ ಕಡೆ ಮೆಚ್ಚುಗೆಯಿಂದ ನೋಡುತ್ತ ನುಡಿದರು.

ಸೂರ್ಯ, ಅಪೂರ್ವ ಇಬ್ಬರೊಡಗೂಡಿ ಎಲ್ಲಾ ಹಿರಿಯರ ಕಾಲಿಗೆರಗಿ ಆಶೀರ್ವಾದ ಪಡೆದರು. ವಿಜಯಮ್ಮ ಉಪಾಹಾರ ನೀಡಲು ತೆರಳಿದಾಗ ಅವರಿಗೆ ಸಹಕರಿಸಲು ವಸುಮತಿ ಹೊರಟಳು.

ಅಲ್ಲೇ ಕುಳಿತಿದ್ದ ಶಂಕರನನ್ನುದ್ದೇಶಿಸಿ ಪುಟ್ಟಸ್ವಾಮಯ್ಯನವರು ಮಾತಿಗೆ ತೊಡಗಿದರು, ‘ಅಪೂರ್ವಳ ತಂದೆಯಾ ನೀವು..?’

‘ಅಲ್ಲಾ.. ನಾನು ಅವ್ಳ ಚಿಕ್ಕಪ್ಪ.. ವಸುಮತಿ ನನ್ನ ಪತ್ನಿ.. ನಮ್ದು ಶಿವಮೊಗ್ಗದ ಹತ್ತಿರ ಹಳ್ಳಿ..’

‘ಅಂದ್ರೆ ಅಪೂರ್ವಳ ತಂದೆ ತಾಯಿ..?’

‘ತಾಯಿ ಮುಂಚೆನೇ ತೀರ್ಕೊಂಡ್ರು.. ಅಪೂರ್ವಳಿಗೆ ಹತ್ತು ವರ್ಷಗಳಾಗಿರುವಾಗ ಅವ್ಳ ತಂದೆ ..’ ಎಂದವನು ಎದುರು ಕುಳಿತಿದ್ದ ರಾಯರ ಮುಖ ನೋಡಿ ಮಾತು ನಿಲ್ಲಿಸಿದ. ಪ್ರಭಾಕರರಾಯರ ಮುಖ ಕಪ್ಪಿಟ್ಟಿತು. ವಿಜಯಮ್ಮ ಅಷ್ಟರಲ್ಲಿ ತಾವು ತಂದ ಉಪಾಹಾರದ ತಟ್ಟೆಯನ್ನು ಪುಟ್ಟಸ್ವಾಮಯ್ಯನವರ ಮುಂದೆ ಹಿಡಿದರು. ಅದನ್ನು ಸ್ವೀಕರಿಸಿದ ಅವರು ಮತ್ತೆ ಶಂಕರನನ್ನುದ್ದೇಶಿಸಿ, ‘ಏನೋ ಹೇಳ್ತಿದ್ರಲ್ವಾ ನೀವು..? ಅವ್ಳ ತಂದೇಗೆ ಏನಾಯ್ತು..?’

‘ಆತನೂ ಹೋಗ್ಬಿಟ್ರು.. ಆಮೇಲೆ .. ನಾವೇ ಊರಿಗೆ ಕರೆದೊಯ್ದು ಅವ್ಳನ್ನು ಸಾಕಿದ್ದು, ಬೆಳೆಸಿದ್ದು.. ಪಿಯುಸಿ ತನಕ ಅಲ್ಲೇ ಕಲಿತ್ಲು ಅಪೂರ್ವ.. ಈಗ ಸಿಇಟಿ ಬರೆದು ರಾಮಯ್ಯ ಕಾಲೇಜಿನಲ್ಲಿ ಇಂಜಿನಿಯರಿಂಗ್ ಮುಗಿಸಿದ್ಲು.. ಇವ್ರ ಮನೇಲಿದ್ದುಕೊಂಡು..’

‘ನೀವೇ ಅವ್ಳ ಪಾಲಿಗೆ ಹೆತ್ತವರು ಅನ್ನಿ..’

‘ಅವ್ಳಿಗೆ ವಿಪ್ರೋದಲ್ಲಿ ಕೆಲಸನೂ ಸಿಕ್ತು.. ’ ಶಂಕರ ಎದೆಯುಬ್ಬಿಸಿ ನುಡಿದ.

‘ಕೆಲಸ ಸಿಕ್ಕಿದೆ.. ಮದ್ವೆ ಆಗ್ತಿದೆ.. ಜೀವನ ನೆಲೆ ಕಾಣ್ತದೆ.. ಅಭಿನಂದನೆಗಳು ಕಣಮ್ಮ ನಿನ್ಗೆ.. ದೇವರು ನಿಮ್ಮಿಬ್ಬರನ್ನೂ ಚೆನ್ನಾಗಿಟ್ಟಿರಲಿ..’ ಎಂದು ಮನದುಂಬಿ ಹರಸಿದರು.

ರಾಯರು ಮೌನ ಧರಿಸಿಕೊಂಡೇ ಇದ್ದದ್ದನ್ನು ಕಂಡು ಪುಟ್ಟಸ್ವಾಮಯ್ಯ ಗೆಳೆಯನ ಬೆನ್ನು ತಟ್ಟುತ್ತ, ‘ಮಗನ ಮದ್ವೆ ಆಗ್ತಿದೆ.. ಯಾಕೋ ಸಪ್ಪಗಿದ್ದೀಯಾ? ಆರೋಗ್ಯ ಸರಿಯಾಗಿದೆ ತಾನೇ?’

‘ಹ್ಞೂಂ..’ ಎಂದಷ್ಟೇ ಹೇಳಿದರು.

‘ಅಪೂರ್ವಳ ಮನೆಯವರು ನಿನ್ಗೆ ಹೇಗೋ ಪರಿಚಯ? ಅವ್ರು ನೋಡಿದ್ರೆ ಶಿವಮೊಗ್ಗದವರು .. ಅವ್ಳ ತಂದೆ ನಿನ್ಗೆ ಪರಿಚಯನಾ..?’

ರಾಯರು ಉತ್ತರಿಸುವ ಮೊದಲೇ ಶಂಕರ ಮಧ್ಯೆ ಬಾಯಿ ಹಾಕಿದ.

‘ಅಪೂರ್ವಳ ತಂದೆ ಇಲ್ಲೇ ಬೆಂಗಳೂರಿನಲ್ಲೇ ಇದ್ರು.. ಜಾಲಳ್ಳೀಲಿ.. ಅವ್ರ ಹೆಸರು ಕರುಣಾಕರ ಅಂತ..’ ಸೂರ್ಯನ ಮುಖ ನೋಡುತ್ತ ಶಂಕರ ನುಡಿದಾಗ, ಸೂರ್ಯನ ಕೈಯ್ಯಲ್ಲಿದ್ದ ಪ್ಲೇಟು ನೆಲದ ಪಾಲಾಯಿತು. ಗಂಟಲ ಪಸೆ ಆರಿ ಹೋದಂತಾಗಿ ದಿಗ್ಮೂಢನಾಗಿ ನಿಂತು ಬಿಟ್ಟ.

ಪುಟ್ಟಸ್ವಾಮಯ್ಯನವರಿಗೂ ಆಗ ಪರಿಸ್ಥಿತಿಯ ಸಂಪೂರ್ಣ ಅರಿವಾಗಿತ್ತು.

ಅಪೂರ್ವಳನ್ನು ಹೊರತುಪಡಿಸಿ ಉಳಿದವರಿಗೆಲ್ಲಾ ಅಲ್ಲಿ ಸಂದರ್ಭದ ಬಿಸಿ ತಟ್ಟಿತ್ತು.